# ನೋವಿನ ನಡುವೆಯೂ ಕಾಳಜಿ ಥ್ಯಾಂಕ್ಯೂ...

## ಕೊರೊನಾ ಸೋಂಕುಪೀಡಿತರ ಸೇವೆಯಲ್ಲಿರುವ ವೈದ್ಯರ ಅನುಭವ ಕಥನ

■ ಡಾ. ಅರುಣ್ ಕುಮಾರ್ ಎಂ.



**ವೈದ್ಯರು ರೋಗಿಗಳ ಯೋಗಕ್ಷೇಮ ವಿಚಾರಿಸುವುದು ಸಹಜ. ಕೆಲವೊಮ್ಮೆ ರೋಗಿಗಳು ಹಾಗೂ ಅವರ ಸಂಬಂಧಿಕರು ತಮ್ಮ ಸಂಕಟದ ನಡುವೆಯೂ ವೈದ್ಯರ ಕುಶಲ ವಿಚಾರಿಸುತ್ತಾರೆ. ಅಂಥ ಮಾನವೀಯ ಕ್ಷಣಗಳೇ ವೈದ್ಯರ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತವೆ. ಕೊರೊನಾ ಬಿಕ್ಕಟ್ಟಿನ ಸಂದರ್ಭದಲ್ಲಿ ವೈದ್ಯರು ಮತ್ತು ರೋಗಿಗಳ ನಡುವಣ ಆಪ್ತ ಕ್ಷಣಗಳ ಈ ಬರಹ, ಮಾನವೀಯತೆಯ ಬಗೆಗಿನ ನಂಬಿಕೆಯನ್ನು ಹೆಚ್ಚಿಸುವಂತಿದೆ.**

ಮಧ್ಯಾಹ್ನದ ಪಾಳಿಯ ಕೆಲಸ ಮುಗಿಸಿ ರೂಮಿಗೆ ಬಂದೆ. ಅಮ್ಮನಿಗೆ ಕರೆ ಮಾಡಲು ಮೊಬೈಲ್ ಫೋನನ್ನು ತೆಗೆದೆ. ಅಷ್ಟರಲ್ಲೇ ಅನಾಮಧೇಯ ಕರೆಯೊಂದು ಬರತೊಡಗಿತು. ಅನವಶ್ಯಕ ಕರೆಗಳಿಂದ ಬೇಸತ್ತು, ಅನಾಮಿಕ ಕರೆಗಳನ್ನು ಸ್ವೀಕರಿಸುವುದನ್ನು ಬಿಟ್ಟು ಬಹಳಷ್ಟು ದಿನಗಳೇ ಆಗಿತ್ತು. ಅಂತಹುದೇ ಕರೆ ಇರಬೇಕು ಎಂದೆನಿಸಿ ನಿರ್ಲಕ್ಷಿಸಿದೆ. ಕರೆಯನ್ನು ಹಿಂಬಾಲಿಸಿ ಸಂದೇಶವೊಂದು ಬಂದಿತು. 'ನಾನು ನಿಮ್ಮ ಪೇಷೆಂಟ್ ಆಸಿಯಾ (ಹೆಸರು ಬದಲಿಸಲಾಗಿದೆ) ಸಂಬಂಧಿ. ಮಗುವಿನ ಆರೋಗ್ಯಸ್ಥಿತಿಯ ಬಗ್ಗೆ ತಮ್ಮ ಬಳಿ ಮಾತನಾಡಬೇಕು' ಎಂದು ಆ ಸಂದೇಶದಲ್ಲಿ ಬರೆದಿತ್ತು. ದಿನಕ್ಕೆ ನೂರಾರು ರೋಗಿಗಳನ್ನು ನೋಡುವ ವೈದ್ಯರಿಗೆ ತಕ್ಷಣವೇ ಓರ್ವ ರೋಗಿಯ ಬಗ್ಗೆ ಕೇಳಿದರೆ ನೆನಪು ಮಾಡಿಕೊಳ್ಳುವುದು ಸ್ವಲ್ಪ ಕಷ್ಟ. ನಾನು ಆ ಮಗುವಿನ ವಿವರಗಳನ್ನು ಕೇಳುತ್ತ ಆಕೆಯ ವಯಸ್ಸು, ಕಾಯಿಲೆಯ ಬಗ್ಗೆ ಪ್ರಶ್ನಿಸುತ್ತಲೇ, ಆ ಕಡೆಯಿಂದ ಭಾವಚಿತ್ರವೊಂದು ನನ್ನ ಸಂದೇಶ ಪೆಟ್ಟಿಗೆಯನ್ನು ಸೇರಿತ್ತು. ಫೋಟೊ ನೋಡುತ್ತಲೇ ಅವಳ ಸಂಪೂರ್ಣ ಇತಿಹಾಸ ನನ್ನ ಸ್ಮೃತಿಪಟಲದಲ್ಲಿ ಗೋಚರವಾಯಿತು.

ರಕ್ತಹೀನತೆಯ ತೊಂದರೆಗೆ ಚಿಕಿತ್ಸೆ ಫಲಕಾರಿಯಾಗದೆ ಕಾಯಿಲೆಯ ಮೂಲವನ್ನು ಪತ್ತೆಹಚ್ಚಲು ಬಹಳಷ್ಟು ಸೆಣಸಾಡಬೇಕಾದ ಸವಾಲಿನ ಕೇಸ್ ಅದಾಗಿತ್ತು. ಕರುಳಿನ ಅಲರ್ಜಿ ಅವಳೆಲ್ಲ ತೊಂದರೆಗಳಿಗೆ ಕಾರಣವೆಂದು ಕಂಡುಹಿಡಿದ ಕೀರ್ತಿ ನನ್ನದಾಗಿತ್ತು. ವಿಪರ್ಯಾಸವೆಂಬಂತೆ ಮಗುವಿಗೆ ಕರುಳಿನ ಅಲರ್ಜಿಯ ಜೊತೆಗೆ ಲಿವರ್‌ನ ತೊಂದರೆ ಕೂಡ ಕಂಡುಬಂದಿತ್ತು. ಅದರ ಜಾಡನ್ನು ಹಿಡಿದು ಲಿವರ್ ತೊಂದರೆಯ ಕಾರಣವನ್ನು ಹುಡುಕಲಾರಂಭಿಸಿದ್ದೆವು. ಅಷ್ಟರಲ್ಲಿ ಕೊರೊನಾ ಎಂಬ ಜಾಗತಿಕ ಮಹಾಮಾರಿ ತನ್ನ ದೈತ್ಯ ಕಾಲನ್ನು ಇಟ್ಟಾಗಿತ್ತು. ಆ ಕಾರಣದಿಂದಾಗಿ ನಮ್ಮ ಆಸ್ಪತ್ರೆಯನ್ನು ನಿಗದಿತ ಕೋವಿಡ್ ಆಸ್ಪತ್ರೆಯನ್ನಾಗಿ ಪರಿವರ್ತಿಸಲಾಗಿತ್ತು. ಇದರಿಂದ ಕೊರೊನೇತರ ರೋಗಿಗಳಿಗೆ ಬಹಳಷ್ಟು ತೊಂದರೆಯಾಗಿತ್ತು.

ಕೊರೊನಾ ಕಾರಣದಿಂದಾಗಿಯೇ ಆಸಿಯಾ ಕೂಡ ನಾಲ್ಕೈದು ತಿಂಗಳಿಂದ ಆಸ್ಪತ್ರೆಗೆ ಬಂದಿರಲಿಲ್ಲ. ಕ್ಲಿಷ್ಟಕರವಾದ ಕೇಸ್ ಆಗಿದ್ದರಿಂದ ಸಣ್ಣಪುಟ್ಟ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವುದು ಸುಲಭವಾಗಿರಲಿಲ್ಲ. ದಿಕ್ಕುತೋಚದೆ ಆಕೆಯ ಪೋಷಕರು ನನಗೆ ಕರೆ ಮಾಡಿದ್ದರು. ಪ್ರತಿಬಾರಿಯೂ ಆಸ್ಪತ್ರೆಗೆ ಆಸಿಯಾಳ ಜೊತೆ ಅವಳ ತಾಯಿ ಬರುತ್ತಿದ್ದರಾದರೂ, ಈ ಬಾರಿ ಫೋನಿನಲ್ಲಿ ಮಾತನಾಡಿದ್ದುದು ಅವಳ ಅಕ್ಕ. ನಾನು ಮಗುವಿನ